# ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ತಗ್ಗಪ್ಪ ಹನುಮಂತಪ್ಪ ದೇಸಾಯಿ-ವಿರುದ್ಧ-ಲತ ತಮ್ಮಣ್ಣವರ್ ಹಾಗೂ ಮತ್ತೊಬ್ಬರು

ಕ್ರಿಮಿನಲ್ ಅರ್ಜಿ ಸಂ: 101996/2015, ದಿನಾಂಕ 2 ನೇ ಫೆಬ್ರುವರಿ, 2017.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ಅರ್ಜಿದಾರರ ಪರ ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇವೆ, ದಾಖಲೆಗಳನ್ನು ಪರಿಶೀಲಿಸಿರುತ್ತೇವೆ. ಇಬ್ಬರೂ ನ್ಯಾಯವಾದಿಗಳ ಸಮ್ಮತಿಯೊಂದಿಗೆ, ಈ ಅರ್ಜಿಯನ್ನು ದಾಖಲಿಸಿಕೊಳ್ಳುವ ಹಂತದಲ್ಲಿಯೇ ವಿಲೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ.

2. ಅರ್ಜಿದಾರರು, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದ ಓದಿನೊಂದಿಗೆ 143, 147, 148, 323, 324, 506 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಬೆಳಗಾಂ ಜಿಲ್ಲೆಯ ಚಿಕ್ಕೋಡಿಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿಯ ಕಡತದ ಮೇಲೆ ಸಿ.ಸಿ.ಸಂ .335/ರಲ್ಲಿ ಕ್ರಿಮಿನಲ್ ಪ್ರಕರಣದಲ್ಲಿನ ಕ್ರಿಮಿನಲ್ ಪ್ರಕರಣವನ್ನು ರದ್ದು ಪಡಿಸಲು ಕೋರಿ ಈ ನ್ಯಾಯಾಲಯಕ್ಕೆ ಬಂದಿರುತ್ತಾರೆ.

3. ದಾಖಲೆಗಳಿಂದ ಹೊರಬಂದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ, ಲಲಿತಾ ಮನೋಹರ್ ಎಂಬ ಹೆಸರಿನ ಮಹಿಳೆಯು ಇಲ್ಲಿನ ಅರ್ಜಿದಾರರ ವಿರುದ್ಧ ಒಂದು ದೂರನ್ನು ದಾಖಲಿಸಿದ್ದು, ಅದರಲ್ಲಿ, 17.11.2013 ರಿಂದ ತನ್ನೊಂದಿಗೆ ಆಪಾದಿತ-ಅರ್ಜಿದಾರನು ಗೆಳೆತನವನ್ನು ಬೆಳೆಸಿಕೊಂಡನೆಂದು, ನಂತರ ನಮ್ಮಿಬ್ಬರ ನಡುವೆ ಗೆಳೆತನ ಪ್ರೀತಿಯಾಗಿ, ಪರಸ್ಪರ ಪ್ರೀತಿಸುತ್ತಿದ್ದೇವೆಂದೂ ಹೇಳಿರುತ್ತಾಳೆ. ಅರ್ಜಿದಾರನನ್ನು ಮನವೊಲಿಸಿಕೊಂಡ ಮೇಲೆ, ದೂರುದಾರಳು ತನ್ನೊಂದಿಗೆ ಲೈಂಗಿಕ ಸಂಬಂಧಕ್ಕೂ ಕೂಡ ಅನುಮತಿಸಿರುತ್ತಾಳೆ. ಈ ನಿರ್ದಿಷ್ಟ ಅಂಶವು ತುಂಬಾ ಧೀರ್ಘಕಾಲಿನವಾಗಿಯೇ ಮುಂದುವರೆದಿರುತ್ತದೆ. 2004 ರಲ್ಲಿ ಮತ್ತೊಬ್ಬ ಮಹಿಳೆಯನ್ನು ವಿವಾಹವಾಗಿದ್ದಾಗ್ಯೂ ಸಂಬಂಧವು ಮುಂದುವರೆದಿರುತ್ತ ದೆಂಬುದು ಕಂಡುಬಂದಿರುತ್ತದೆ. ಅಲ್ಲದೆ ದೂರಿನಲ್ಲಿ, 2009 ನೇ ವರ್ಷದಲ್ಲಿ, ಅರ್ಜಿದಾರ ಹಾಗೂ ದೂರುದಾರಳ ನಡುವಿನ ಸಂಬಂಧವು ತಿಳಿದುಬಂದು, 2009 ನೇ ವರ್ಷದಲ್ಲಿ, ಅರ್ಜಿದಾರನ ಪತ್ನಿ, ಅರ್ಜಿದಾರ ಹಾಗೂ ಮಹಿಳೆಯ (ದೂರುದಾರಳು) ವಿರುದ್ಧ ದೂರನ್ನು ಸಲ್ಲಿಸಿರುತ್ತಾಳೆ. ತರುವಾಯ ಆತನನ್ನು ಕೆಲಸದಿಂದ ತೆಗೆದುಹಾಕಲಾಗಿರುತ್ತೆಂದೂ ತಿಳಿದು ಬಂದಿರುತ್ತದೆ. ವಾಸ್ತವವಾಗಿ, ಸಮಯದಲ್ಲಿಯೇ ಅಂದರೆ, ದೂರುದಾರಳು, 2003 ರಿಂದಲೇ ಆತ ತನ್ನನ್ನು ಮದುವೆಯಾಗುವುದಾಗಿ ನಂಬಿಸಿದ್ದು, ಅದರ ಆಧಾರದ ಮೇಲೆ ಆತನಿಗೆ ತಾನು ಹಣಕಾಸಿನ ನೆರವನ್ನು ನೀಡಿರುತ್ತೇನೆಂದು ಹೇಳಿರುತ್ತಾಳೆ. ಆದ್ದರಿಂದ, ದೂರುದಾರಳು ತನಗೆ ವಂಚನೆ ಮಾಡಿ, ಮಾತಿಗೆ ತಪ್ಪಿದ್ದಾನೆಂದು ಆಪಾದಿಸಿ, ದೂರನ್ನು ದಾಖಲಿಸಿರುತ್ತಾಳೆ. ಸದರಿ ದೂರಿನ ಆಧಾರದ ಮೇಲೆ, ಪೊಲೀಸರು, ಭಾರತ ದಂಡ ಸಂಹಿತೆಯ 417 ಹಾಗೂ 420 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧ ಸಂ. 183/2014 ರಲ್ಲಿ ಪೊಲೀಸರು ಪ್ರಕರಣವನ್ನು ದಾಖಲಿಸಿರುತ್ತಾರೆ. ಆ ಮೂಲಕ ತನಿಖೆಯ ತರುವಾಯ, ಪೊಲೀಸರು ಭಾರತ ದಂಡ ಸಂಹಿತೆಯ 417 ಹಾಗೂ 420 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಪೊಲೀಸರು ನ್ಯಾಯಾಲಯದ ಎದುರು ಆರೋಪ ಪಟ್ಟಿಯನ್ನು ಸಲ್ಲಿಸಿದ ತರುವಾಯವಷ್ಟೇ ನಡಾವಳಿಗಳಲ್ಲಿ ನಿಜವಾದ ವ್ಯತ್ಯಾಸವು ಉಂಟಾಗಿರುತ್ತದೆ. ನಿಜವಾದ ವಿವಾದವನ್ನು ಹೇಳುವ ಮೊದಲು ವಿಚಾರಣಾ ನ್ಯಾಯಾಲಯದ ಯುಕ್ತ ದಿನಾಂಕಗಳ ಆದೇಶ ಪತ್ರವನ್ನು ಉದ್ಧರಿಸುವುದು ಯುಕ್ತವಾದುದು ಹಾಗೂ ಅವಶ್ಯಕವಾದುದು ಆಗಿರುತ್ತದೆಂದು ನಾನು ಭಾವಿಸುತ್ತೇನೆ. ಅದು ಮುಂದಿನಂತಿರುತ್ತದೆ:

| ಕ್ರ.ಸಂ. | ದಿನಾಂಕ | ನಡಾವಳ |
|---|---|---|
| | 27-05-2015 | ಶ್ರೀಮತಿ ವೈ.ಎಲ್.ಲಡಖಾನ್<br>ಬಿ.ಎ.ಎಲ್ಎಲ್‌ಬಿ, (ವಿಶೇಷ) ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಚಿಕ್ಕೋಡಿ,<br><br>ಚಿಕ್ಕೋಡಿಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಭಾರತ ದಂಡ ಸಂಹಿತೆಯ 149 ನೇ ಪ್ರಕರಣದ ಒದಿನೊಂದಿಗೆ 143, 147, 148, 323, 324, 506e ಪ್ರಕರಣಗಳಡಿಯಲ್ಲಿ ದ ಂ ಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತನ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾನೆ.<br>ಮೂಲ ಪ್ರಥಮ ವರ್ತಮಾನ ವರದಿ ಹಾಗೂ ದೂರು ಮತ್ತು ಪಿಎಫ್‌ಗಳನ್ನು ಈ ಕಡತದಲ್ಲಿ ಸೇರ್ಪಡೆಯಾಗಿರುತ್ತವೆ. ಕಾಗದ ಪತ್ರಗಳನ್ನು ರವಾನಿಸಿದಾಗ, ಆಪಾದಿತನು ನ್ಯಾಯಾಲಯದ ಜಾಮೀನಿನ ಮೇಲೆ ಇದ್ದಾನೆಂಬುದು ತಿಳಿದುಬರುತ್ತದೆ ಆದೇಶಕ್ಕಾಗಿ ಸಲ್ಲಿಸಲಾಗಿರುತ್ತದೆ.<br>**ಶಿರಸ್ತೇದಾರ್.**<br>**<u>ಆದೇಶ</u>**<br><br>ಪ್ರಾಸಿಕ್ಯೂಷನ್ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿರುತ್ತದೆ. ಅವುಗಳೆಲ್ಲಾ, ಯುಕ್ತ ಆಧಾರಗಳನ್ನು ಒದಗಿಸಿದ್ದು, ಆಪಾದಿತ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸಲು, ಮೇಲ್ನೋಟಕ್ಕೆ ಅಪರಾಧವು ಸಾಬೀತಾಗಿರುತ್ತದೆ. ತದನುಸಾರವಾಗಿ.<br>ಅಪಾದಿತನ ವಿರುದ್ಧ ಭಾರತ ದಂಡ ಸಂಹಿತೆಯ 149 ನೇ ಪ್ರಕರಣದ ಒದಿನೊಂದಿಗೆ 143, 147, 148, 323, 324, 504 ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಜ್ಞೆಯವನ್ನು ತೆಗೆದುಕೊಳ್ಳಲಾಗಿರುತ್ತದೆ.<br><br>ಹಾಗಾಗಿ, ಮೇಲಿನ ಸದರಿ ಅಪರಾಧಗಳಿಗೆ ಸಂಬಂಧಿಸಿದಂತೆ, ನೋಂದಣಿ ಸಂ. III (ಕ್ರಿಮಿನಲ್) ಸಿ.ಸಿ.ಯಂತೆ ಆಪಾದಿತನ ವಿರುದ್ಧ ಪ್ರಕರಣವನ್ನು ನೋಂದಾಯಿಸಲಾಗಿರುತ್ತದೆ. 275/2015.<br>ಸಹಿ/-... 28/4/15<br>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ,<br>ಚಿಕ್ಕೋಡಿ |

5. ಮ್ಯಾಜಿಸ್ಟ್ರೇಟರು, ದಿನಾಂಕ: 28.04.2015 ರಂದು ಆದೇಶದ ಮೂಲಕ ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 143, 147, 148, 323, 324, 506 ನೇ ಪ್ರಕರಣಗಳಡಿ ಅಪರಾಧಗಳನ್ನು ಸಂಜ್ಞೆಯಕ್ಕೆ ತೆಗೆದುಕೊಂಡಿರುತ್ತಾರೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಹಾಗೂ ಆಪಾದಿತರಿಗೆ ಸಮನುಗಳನ್ನು ಹೊರಡಿಸಿರುತ್ತಾರೆಂದು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ತದನುಸಾರವಾಗಿ,

ಆಪಾದಿತನು ಈ ನ್ಯಾಯಾಲಯದ ಎದುರು ಹಾಜರಾಗಿರುತ್ತಾರೆ. ಆದಾಗ್ಯೂ, ಆರೋಪ ಪಟ್ಟಿಯ ಪ್ರತಿಗಳನ್ನು ಇವರಿಗೆ ಒದಗಿಸಿದ ತರುವಾಯ, ಅರ್ಜಿದಾರರಿಗೆ, ಭಾರತ ದಂಡ ಸಂಹಿತೆಯ 417 ಹಾಗೂ 420 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ಸಂಜ್ಞೆಯತೆಯನ್ನು ಕೈಗೊಂಡಿರುವುದಿಲ್ಲವೆಂದು ತಿಳಿದುಬಂದಿರುತ್ತದೆ.

6. ಆರೋಪ ಪಟ್ಟಿಯ ಒಳಾಂಶಗಳಿಗೆ ಹಾಗೂ ಭಾರತ ದಂಡ ಸಂಹಿತೆಯ 417 ಹಾಗೂ 420 ನೇ ಪ್ರಕರಣಗಳಡಿಯಲ್ಲಿ ಅದರಲ್ಲಿನ ಆಪಾದಿತ ಅಪರಾಧಗಳಿಗೆ ಸಂಬಂಧಿಸಿದಂತೆ ವಿವರವಾಗಿ ಅರ್ಜಿದಾರರ ಪರ ಮಾನ್ಯ ವಕೀಲರು ವಾದಿಸಿದ್ದಾಗ್ಯೂ, ಈ ಹಂತದಲ್ಲಿ ಸರಿಪಡಿಸಲಾಗದಂಥ ವ್ಯತ್ಯಾಸ ಹಾಗೂ ಕಾನೂನು ಬಾಹಿರತೆ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಎಸಗಿದ ಕಾರ್ಯವಿಧಾನದ ಅಕ್ರಮಗಳ ಹಿನ್ನಲೆಯಲ್ಲಿ, ನಾನು, ಪ್ರಕರಣದ ಗುಣಾರ್ಹತೆಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾನು ಬಯಸುವುದಿಲ್ಲ.

7. ಅದು ಹಾಗಿರಲಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಚಿಕ್ಕೋಡಿ ಇವರು ಆರೋಪ ಪಟ್ಟಿಯಲ್ಲಿ ಆಪಾದಿಸಿದ ಅಪರಾಧಗಳನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮುನ್ನ ಆರೋಪ ಪಟ್ಟಿಯ ಕಾಗದಪತ್ರಗಳನ್ನು ಜಾಗರೂಕವಾಗಿ ಗಮನಿಸದೆ, ಗಂಭೀರಸ್ವರೂಪದ ದೋಷವನ್ನು ಎಸಗಿರುತ್ತದೆಂದು ಈ ಸಂದರ್ಭದಲ್ಲಿ ಈ ನ್ಯಾಯಾಲಯವು ಹೇಳಲೇಬೇಕಾಗಿರುವುದು ನ್ಯಾಯಯುತವೂ, ಯುಕ್ತವೂ ಆಗಿರುತ್ತದೆ. ಅಧಿಕಾರ ವ್ಯಾಪ್ತಿಯಲ್ಲಿರುವ ಮ್ಯಾಜಿಸ್ಟ್ರೇಟರು ತೀರಾ ಯಾಂತ್ರಿಕವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಿರುತ್ತಾರೆ. ಇದು, ಮ್ಯಾಜಿಸ್ಟ್ರೇಟರು ನ್ಯಾಯಿಕ ವಿಚಾರಶಕ್ತಿಯಿಂದ ವಿಷಯವನ್ನು ಅವಲೋಕಿಸಿಲ್ಲವೆಂಬುದನ್ನು ತೋರಿಸುತ್ತದೆ. ಆದರೆ, ಪ್ರಥಮ ಮಾಹಿತಿ ವರದಿ ಅಥವಾ ಆರೋಪ ಪಟ್ಟಿಯಲ್ಲಿ ನಮೂದಿಸದಂಥ ಅಪರಾಧಗಳನ್ನು ಸಂಜ್ಞೇಯಕ್ಕೆ ತೆಗೆದುಕೊಂಡಿರುತ್ತದೆ. ಭಾರತ ದಂಡ ಸಂಹಿತೆಯ 417 ಹಾಗೂ 420 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಳ್ಳದಿರುವಾಗ, ನ್ಯಾಯಾಲಯವು ಆಪಾದಿತರ ವಿರುದ್ಧ ಆರೋಪ ಪಟ್ಟಿಯಲ್ಲಿ ಮಾಡಿದ ಆಪಾದನೆಗಳೊಂದಿಗೆ ಮುಂದುವರೆಯುವಂತಿಲ್ಲ.

8. ಅಧಿವಿಚಾರಣಾ ನ್ಯಾಯಾಲಯದ ಆದೇಶ ಪ್ರತಿಯು, ಸದರಿ ನ್ಯಾಯಾಲಯದ ಶಿರಸ್ತೇದಾರರು, ಆದೇಶಕ್ಕೆ ಸಂಬಂಧಿಸಿದಂತೆ ಕಡತವನ್ನು ಸಲ್ಲಿಸಿದ್ದು, ಅದರಲ್ಲಿ ಅಪರಾಧಗಳ ಉಪಬಂಧಗಳನ್ನು ಖಾಲಿ ಗಣಕೀಕೃತ ಆದೇಶದ ಹಾಳೆಯಲ್ಲಿ ಭರ್ತಿಮಾಡಿರುತ್ತಾರೆಂಬುದನ್ನು ಹಾಗೂ ಆ ತರುವಾಯ, ಸಹಿಗಾಗಿ ನ್ಯಾಯಾಧೀಶರ ಮುಂದೆ ಸಲ್ಲಿಸಲಾಗಿರುತ್ತದೆಂಬುದನ್ನು ತೋರಿಸುತ್ತದೆ. ಆದಾಗ್ಯೂ, ಇದರ ಕಡೆ ಗಮನಕೊಡದೆ, ಆದೇಶ ಪತ್ರದ ಖಾಲಿ ಅಂಕಣದಲ್ಲಿ ಕೆಲವು ಇತರೆ ಅಪರಾಧಗಳನ್ನು ನಮೂದಿಸಿ ಕಚೇರಿಯು ಮುದ್ರಿಸಿ ಸಿದ್ಧಪಡಿಸಿರುವಂಥ ಆದೇಶಕ್ಕೆ ನ್ಯಾಯಿಕ ಅಧಿಕಾರಿಯು ಸಹಿ ಮಾಡಿರುತ್ತಾರೆ.

9. ಆದೇಶ ಪತ್ರದಲ್ಲಿ ನಮೂದಿಸಿದ ದಿನಾಂಕಗಳು ಅಂದರೆ ಆದೇಶಕ್ಕಾಗಿ ಪ್ರಕರಣವನ್ನು ಮಂಡಿಸಿದ 27.05.2015, ಅಲ್ಲದೆ 28.04.2015 ರಂದು ಮ್ಯಾಜಿಸ್ಟ್ರೇಟರು ಆದೇಶಿಕೆಯನ್ನು ಹೊರಡಿಸಿದ ಹಾಗೂ 27.05.2015 ರಂದು ಮತ್ತೊಮ್ಮೆ ಪ್ರಕರಣವನ್ನು ಮಂಡಿಸಿದ ರೀತಿಯ ಸಾಕಷ್ಟು ಗೊಂದಲವನ್ನು ಉಂಟುಮಾಡಿರುತ್ತದೆ. ಅಲ್ಲದೆ, ಕನಿಷ್ಠರೀತಿಯಲ್ಲಿ ಗಮನಹರಿಸದೆ ಒಂದಕ್ಕೊಂದು ತಾಳೆಯಾಗದಂತೆ ದಿನಾಂಕಗಳನ್ನು ನಮೂದಿಸಿರುವುದೂ ಸಹ ಸಂದೇಹವನ್ನು ಸೃಷ್ಟಿಸಿರುತ್ತದೆ.

10. ದಂಡ ಪ್ರಕ್ರಿಯಾ ಸಂಹಿತೆಯ 204 ನೇ ಪ್ರಕರಣದಡಿಯಲ್ಲಿ ಆಪಾದಿತರಿಗೆ ಸಮನುಗಳನ್ನು ನೀಡುವ ಅಧಿಕಾರವಿರುವಂಥ ನ್ಯಾಯಿಕ ಮ್ಯಾಜಿಸ್ಟ್ರೇಟರು ಆಪಾದಿತನನ್ನು ಸಮನುಮಾಡುವ ಆದೇಶವು ಗಂಭೀರ ಸ್ವರೂಪದ್ದಾಗಿರುತ್ತದೆ ಹಾಗೂ ಕ್ರಿಮಿನಲ್ ಕಾನೂನನ್ನು ತೀರಾ ಸಹಜವಾದ ಪ್ರಸ್ತಾವದಂತೆ ರೂಪಿಸಲಾಗುವುದಿಲ್ಲವೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುತ್ತದೆ. ಸಮನುಮಾಡುವ ಆದೇಶವು, ಪ್ರಕರಣದ ವಾಸ್ತವಾಂಶಗಳಿಗೆ ಹಾಗೂ ಅವುಗಳಿಗೆ ಅನ್ವಯವಾಗುವ ಕಾನೂನುಗಳಿಗೆ ಗಮನ

ಹರಿಸಿರುತ್ತಾರೆಂಬುದನ್ನು ಪ್ರತಿಫಲಿಸುವಂತಿರಬೇಕು. ಆಪಾದಿತನನ್ನು ಸಮಾನುಮಾಡುವ ಆದೇಶವು ಸಕಾರಣದ ಆದೇಶ ಹಾಗೂ ವಿವರಣಾತ್ಮಕವಾದ ಆದೇಶವಾಗಿರಬೇಕಾದ ಅವಶ್ಯಕತೆಯಿರುವುದಿಲ್ಲ. ಆದರೆ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಇದು ಯಾವುದೇ ಅಸ್ಥಿರತೆ ಅಥವಾ ಕಾನೂನುಬಾಹಿರತೆಯಿಂದ ಬಳಲುವಂತಿರಬಾರದು. ಆದಾಗ್ಯೂ, ಸಂಕ್ಷಿಪ್ತವಾಗಿ, ಸಮನುಗಳನ್ನು ಹೊರಡಿಸಲು ಇದು ಯುಕ್ತ ಪ್ರಕರಣವೆಂದೂ, ಹಾಗಿಲ್ಲದಿದ್ದಲ್ಲಿ, ಅ ಂ ಥ ಸವನುಮಾಡುವ ಆದೇಶವು ಕಾನೂನು ದೃಷ್ಟಿಯಿ ಂ ದ ದೋಷಪೂರ್ಣವಾಗಿದೆಯೆಂಬ ತೀರ್ಮಾನಕ್ಕೆ ಬರಬಹುದಾಗಿದ್ದು, ಆ ಕಾರಣಗಳನ್ನು ಆದೇಶದಲ್ಲಿ ದಾಖಲಿಸಬೇಕಾಗಿರುತ್ತದೆ. ಆದೇಶವನ್ನು ಹೊರಡಿಸುವಾಗ, ಮ್ಯಾಜಿಸ್ಟ್ರೇಟರು ಅತಿ ಜಾಗರೂಕತೆಯಿಂದ ಪರಿಶೀಲಿಸುವ ಹಾಗೂ ದಾಖಲೆ ಮೇಲಿನ ವಿಷಯಗಳನ್ನು ಮೌಲ್ಯಮಾಪನ ಮಾಡುವ ಅವಶ್ಯಕತೆಯಿರುವುದಿಲ್ಲ. ಆದಾಗ್ಯೂ, ಅಲ್ಲದೆ ಸಂಕ್ಷಿಪ್ತವಾಗಿ ಅಥವಾ ಕ್ವಚಿತ್ತಾಗಿ, ಯಾವುದೇ ಹಂತದಲ್ಲೂ ಮ್ಯಾಜಿಸ್ಟ್ರೇಟರನು ತನ್ನ ಸಂಪೂರ್ಣ ಗಮನವನ್ನು ಕೊಟ್ಟು ಕಾರ್ಯನಿರ್ವಹಿಸಿರಬೇಕೆಂಬ ಮಟ್ಟಿಗೆ ಕಾರಣಗಳನ್ನು ದಾಖಲಿಸಲು ಅಗತ್ಯಪಡಿಸಲಾಗಿರುತ್ತದೆ. 204 ನೇ ಪ್ರಕರಣದಡಿಯಲ್ಲಿ CC ಅಭಿಪ್ರಾಯ " ಹಾಗೂ " ಯುಕ್ತ ಆಧಾರ " ಎಂಬ ಪದಾವಳಿಗಳು, ಆದೇಶವನ್ನು ಹೊರಡಿಸುವ ಮೊದಲು, ಮ್ಯಾಜಿಸ್ಟ್ರೇಟರನು, ಆದೇಶವನ್ನು ಹೊರಡಿಸಲು ಯುಕ್ತ ಪ್ರಕರಣವೆಂದು ಯಾವ ಅಂಶವನ್ನು ತಾನು ಪರಿಗಣಿಸಿದೆನೆಂದು ಮ್ಯಾಜಿಸ್ಟ್ರೇಟರನು ಸೂಚಿಸಬೇಕೆಂಬ ಸೂಚನೆಯನ್ನು ನೀಡುತ್ತದೆ. ವಿವೇಕಯುತ ಮನಸ್ಥಿತಿಯನ್ನು ಅನ್ವಯಿಸದೆ, ಪ್ರಕರಣದ ವಾಸ್ತವಾಂಶಗಳಿಗೆ ಗಮನವನ್ನು ಸಹ ಕೊಡದೆ, ಯಾಂತ್ರಿಕವಾಗಿ, ಆರೋಪ ಪಟ್ಟಿ ಅಥವಾ ಫಿರ್ಯಾದಿನ ಪರಿಣಾಮಕಾರಿ ಭಾಗದ ಆಧಾರದ ಮೇಲೆ ಆದೇಶ ಹೊರಡಿಸುವುದು ಮಾತ್ರವೇ ಮ್ಯಾಜಿಸ್ಟ್ರೇಟರು ಲಕ್ಷವಹಿಸಬೇಕೆಂಬುದಕ್ಕೆ ಕಾರಣವಾಗುವುದಿಲ್ಲ.

11. ಪ್ರಕರಣದ ಮೇಲಿನ ಸದರಿ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನಿಸಿ, ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮೂಲಕ ಮಾನ್ಯ ಮ್ಯಾಜಿಸ್ಟ್ರೇಟರು ಸದರಿ ಆದೇಶ ವು ದೋಷಪೂರ್ಣವು ಹಾಗೂ ಕಾನೂನುಬಾಹಿರವಾಗಿರುತ್ತದೆ ಹಾಗೂ ಅನುಸರಿಸಿದ ಸದರಿ ಕಾರ್ಯವಿಧಾನವು ಕಾನೂನಿನಿಂದ ಅಧಿಕೃತವಾಗಿರುವುದಿಲ್ಲವೆಂದು ನಾನು ಅಭಿಪ್ರಾಯಪಟ್ಟಿರುತ್ತೇನೆ. ಮೇಲಿನ ಸಂದರ್ಭಗಳಡಿಯಲ್ಲಿ ಈ ಮುಂದಿನ ಆದೇಶವನ್ನು ಹೊರಡಿಸಲಾಗಿರುತ್ತದೆ:

ಆಜ್ಞೆ

ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ. ತದನುಸಾರವಾಗಿ, 28.04.2015 ರಂದಿನ ಆದೇಶದ ಮೂಲಕ, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 143, 147, 148, 323, 324, 506 ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಅಧಿ ವಿಚಾರ ಣ ನ್ಯಾ ಂ ತಾಲ ಂ ತವು ಸ ಂಂ ಕ್ಕೆ ತೆಗೆದುಕೊಂಡಿರುವುದನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ. ವಿಷಯವನ್ನು, ಮ್ಯಾಜಿಸ್ಟ್ರೇಟರು ಖುದ್ದಾಗಿ ಗಮನಿಸಿ, ಆಪಾದಿತ ವ್ಯಕ್ತಿಯ ವಿರುದ್ಧ ಆಪಾದಿಸಿರುವ ಅಪರಾಧಗಳನ್ನು ಸಂಸ್ಥೆಯಕ್ಕೆ ತೆಗೆದುಕೊಳ್ಳಲು ಇದು ಯುಕ್ತವಾದ ಪ್ರಕರಣವೇ ಹಾಗೂ, ನ್ಯಾಯಿಕ ಆಯಾಮದಲ್ಲಿ ವಿಷಯವನ್ನು ಪರಿಶೀಲಿಸಿದ ತರುವಾಯ, ಮ್ಯಾಜಿಸ್ಟ್ರೇ ಟರನು, ನಿರ್ದಿಷ್ಟ ಅಪರಾಧಗಳು ಅಥವಾ ಅನ್ಯಥಾ ಸಂಜ್ಞೆಯಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯುಕ್ತ ಆದೇಶಗಳನ್ನು ಹೊರಡಿಸತಕ್ಕದ್ದೆಂದು ನಿರ್ದೇಶಿಸಿ ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಲಾಗಿರುತ್ತದೆ. ಯಾವುದೇ ಅಪರಾಧವನ್ನು ಮಾಡಿರುವಂಥ ವಾಸ್ತವಿಕ ಆಪಾದನೆಗಳನ್ನು ನ್ಯಾಯಾಲಯಕ್ಕೆ ಕಂಡುಬಂದಲ್ಲಿ ಮಾತ್ರ, ನ್ಯಾಯಾಲಯವು ಸಂಕ್ಷೇಯವನ್ನು ತೆಗೆದುಕೊಳ್ಳಲು ಮುಂದುವರೆಯಬಹುದು ಹಾಗೂ ಆಪಾದಿತನ ವಿರುದ್ಧ ಆದೇಶವನ್ನು ಹೊರಡಿಸಬಹುದು.

ವಿವೇಕಯುತವಾಗಿ ಗಮನಹರಿಸದೆ ನ್ಯಾಯಿಕ ಅಧಿಕಾರಿಯು ಸದರಿ ಅಕ್ರಮವನ್ನು ಎಸಗಿರುವುದು ಈ ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ, ಈ ಆದೇಶದ ಒಂದು ಪ್ರತಿಯನ್ನು, ಮೇಲೆ ಗಮನಿಸಲಾದ ದೋಷಗಳು ಸಂಭವಿಸಬಹುದಾದಂಥ ಖಾಲಿ ಅಂಕಣಗಳೊಂದಿಗಿನ ಸೈಕ್ಲೋ-ಸ್ಟೈಲ್ ಅಥವಾ ಗಣಕೀಕೃತ

ಆದೇಶದ ಹಾಳೆಗಳನ್ನು ಬಳಸುವಾಗ ಅತ್ಯಂತ ಜಾಗರೂಕರಾಗಿರಬೇಕೆಂದು ಎಲ್ಲಾ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಈ ಆದೇಶವನ್ನು ಪರಿಚಯಿಸುವುದಕ್ಕೆ ಯುಕ್ತಕ್ರಮ ಕೈಗೊಳ್ಳಲು ರಿಜಿಸ್ಟ್ರಾರ್ ಜನರಲ್‌ಗೆ ಕಳುಹಿಸತಕ್ಕದ್ದು.

ಈ ಮೂಲಕ, ರಿಜಿಸ್ಟ್ರಾರ್ ಜನರಲ್‌ರವರಿಗೆ, ನ್ಯಾಯಾಂಗ ಅಧಿಕಾರಿಗಳಿಗೆ ತರಬೇತಿ ನೀಡುವಾಗ ಯುಕ್ತ ಕ್ರಮ ಕೈಗೊಳ್ಳಲು, ನ್ಯಾಯಾಂಗ ಅಕಾಡಮಿಗೆ ಸಹ ಈ ಆದೇಶದ ಪ್ರತಿಯನ್ನು ಕಳುಹಿಸಲು ನಿರ್ದೇಶಿಸಲಾಗಿರುತ್ತದೆ.